# ಕರಾವಳಿ ಯಕ್ಷಗಾನ ಸಾಹಿತ್ಯ

ಶಂಕರ ಹೆಗ್ಡೆ, ನೇಪರ್ವಿಲ್

ಯಕ್ಷಗಾನ ಎಂದೊಡನೆ ನಮಗೆಲ್ಲರಿಗೆ ನೆನಪಾಗುವದು ರಂಗಸ್ಥಳದ ಮೇಲೆ ಎಂದೋ ನೋಡಿದ ಯಾವುದೋ ಯಕ್ಷಗಾನ ಬಯಲಾಟ ಅಥವಾ ಸಂಗೀತದಿಂದ ಒಡಗೂಡಿದ ನೃತ್ಯ-ನಾಟಕ. ನಾವೆಲ್ಲ ನೋಡಿ ಸಂತೋಷಪಟ್ಟ ಈ ಯಕ್ಷಗಾನ ಕಲಾವಿದರ ಲಯಬದ್ಧ ಕುಣಿತ, ಹಾವ-ಭಾವ, ಹಾಗೂ ಸಂಭಾಷಣೆಗಳಿಗೆ ಆಧಾರ ಯಾವುದು ಎಂದು ಯೋಚಿಸಿದ್ದೀರಾ? ಹಿಮ್ಮೇಳದಲ್ಲಿ ಕುಳಿತು, ವಿಶಿಷ್ಟ ಶೈಲಿಯಲ್ಲಿ, ಶೃತಿ, ತಾಳ, ಮೃದಂಗ, ಮತ್ತು ಕೆಲವೊಮ್ಮೆ ಚಂಡೆಗಳಿಂದ ಕೂಡಿದ ಪಕ್ಕ ವಾದ್ಯಗಳ ಜೊತೆ, ಉಚ್ಚ ಕಂಠದಿಂದ ಹಾಡುವ ಭಾಗವತರ ಪದ್ಯಗಳು. ಇವು ಯಕ್ಷಗಾನ ಪ್ರಸಂಗವೆಂದು ಕರೆಯುವ  ಪ್ರಕಟಿತ ಪುಸ್ತಕವೊಂದರಿಂದ ಆಯ್ದ ಹಾಡುಗಳು. ಅಂದಿನ ದಿನ ಯಾವ ಕಥೆಯನ್ನು ಪ್ರದರ್ಶಿಸಬೇಕೆಂದು ನಿರ್ಧರಿಸಿ, ಆ ಕಥೆಯ ಪ್ರಸಂಗವನ್ನು ಭಾಗವತರು ಮೊದಲೇ ಆಯ್ಕೆ ಮಾಡಿಕೊಂಡಿರುತ್ತಾರೆ. ಯಕ್ಷಗಾನದಲ್ಲಿ ಭಾಗವತರ ಪಾತ್ರ ಬಹಳ ಮುಖ್ಯವಾದದ್ದು. ಪದ್ಯಗಳ ಆಯ್ಕೆ, ಹಾಗೂ ಹಾಡುಗಾರಿಕೆಯಿಂದ ಸನ್ನಿವೇಷಕ್ಕೆ ತಕ್ಕ ಭಾವಾತ್ಮಕ ವಾತಾವರಣ ನಿರ್ಮಿಸುವದು ಅವರ ಕೈಯಲ್ಲಿದೆ. ಭಾಗವತರು ಯಕ್ಷಗಾನದ ನಿರ್ದೇಶಕರು ಎನ್ನಬಹುದು; ನಿಯಂತ್ರಕರೂ ಕೂಡ.

ಈ ಪ್ರಕಟಿತ ಯಕ್ಷಗಾನ ಪ್ರಸಂಗಗಳ ಸಂಗ್ರಹವನ್ನೇ ನಾವು "ಯಕ್ಷಗಾನ ಸಾಹಿತ್ಯ" ಎಂದು ಕರೆಯುವದು. ಇಂದು ಜನಪ್ರಿಯವಾಗಿರುವ ಬಹುಮಟ್ಟಿನ ಪ್ರಸಂಗಗಳು ಹದಿನಾರನೇ ಶತಮಾನದ ಉತ್ತರಾರ್ಧದಿಂದ ಹಿಡಿದು, ಇಪ್ಪತ್ತನೆ ಶತಮಾನದ ಪೂರ್ವಾರ್ಧದ ಅವಧಿಯಲ್ಲಿ ರಚಿತವಾಗಿವೆ. ಸುಮಾರು ಮುನ್ನೂರಾ ಐವತ್ತಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳು ಪ್ರಕಟಿತ ರೂಪದಲ್ಲಿ ದೊರಕಿವೆ. ಯಕ್ಷಗಾನ ನೃತ್ಯ-ನಾಟಕದ, ಹಾಗೂ ಯಕ್ಷಗಾನ ಕುಣಿತದ ನಿಯಮಾವಳಿಗಳನ್ನು ವಿವರಿಸುವ ಶಾಸ್ತ್ರೀಯ ಪುಸ್ತಕಗಳು ಯಕ್ಷಗಾನ ಸಾಹಿತ್ಯದ ಇನ್ನೊಂದು ಅಂಗ,  ಈ ನನ್ನ ಚಿಕ್ಕ ಲೇಖನ ಪ್ರಸಂಗ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದೆ.

ಶಿವರಾಮ ಕಾರಂತರ "ಯಕ್ಷಗಾನ ಬಯಲಾಟ" ಎಂಬ ಸಂಶೋಧನ ಪ್ರಭಂಧಗಳ ಸಂಕಲನದಲ್ಲಿ ಹೇಳಿದಂತೆ, ಯಕ್ಷಗಾನವು ತನ್ನದೇ ಆದ ವಿಶಿಷ್ಟತೆಯುಳ್ಳ ಒಂದು ಸಂಗೀತದ ಶೈಲಿ. ಭಾರತೀಯ ಶಾಸ್ತ್ರೀಯ ಸಂಗೀತದ ಎರಡು ಮುಖ್ಯ ಪದ್ಧತಿಗಳಾದ "ಹಿಂದೂಸ್ತಾನಿ" ಮತ್ತು "ಕರ್ನಾಟಕಿ" ಪದ್ಧತಿಗಳಿಂದ ಭಿನ್ನವೇ ಆದದ್ದು. ಒಂದು ಕಾಲದಲ್ಲಿ ಯಕ್ಷಗಾನ ಸಂಗೀತ ಪದ್ಧತಿಯಲ್ಲಿ 150 ಕ್ಕೂ ಹೆಚ್ಚು ರಾಗಗಳಿದ್ದವೆಂದು ಕಾರಂತರು ಹೇಳುತ್ತಾರೆ. ಯಕ್ಷಗಾನ ಪದ್ಯಗಳಲ್ಲಿ ರಾಗಗಳಷ್ಟೇ ಪ್ರಾಮುಖ್ಯವಾದದ್ದು ತಾಳಗಳು ಕೂಡ. ಯಕ್ಷಗಾನ ನೃತ್ಯದ ಕುಣಿತದ ಹೆಜ್ಜೆಗಳಿಗೆ ಪದ್ಯದ ತಾಳಗಳೇ ತಳಹದಿ. ಯಕ್ಷಗಾನ ಸಂಗೀತ ಪದ್ಧತಿ, ಯಕ್ಷಗಾನ ಬಯಲಾಟಕ್ಕಿಂತ 200 ವರ್ಷಕ್ಕೂ ಮೊದಲೇ ಇದ್ದಿತೆಂದು ಕಾರಂತರ ಅಭಿಮತ. ಯಕ್ಷಗಾನದ ಮೊದಲ ಉಲ್ಲೇಖ ಸಾರಂಗದೇವನ ಕ್ರಿಶ 1210 ರಲ್ಲಿ ಬರೆದ "ಸಂಗೀತ ರತ್ನಾಕರ" ದಲ್ಲಿ 'ಜಕ್ಕ' ಎಂದು ಆಗಿದ್ದು, ಮುಂದೆ 'ಯಕ್ಕಲಗಾನ' ಎಂದು ಕರೆಯಲ್ಪಟ್ಟಿತ್ತು ಎಂಬುದು ಒಂದು ಅಭಿಪ್ರಾಯ. ಗಂಧರ್ವಗ್ರಾಮ ಎಂಬ ಈಗ ನಶಿಸಿ ಹೋಗಿರುವ ಗಾನ ಪದ್ಧತಿಯಿಂದ ಯಕ್ಷಗಾನದ ಗಾನ ಮತ್ತು ಸ್ವತಂತ್ರ ಜಾನಪದ ಶೈಲಿಗಳಿಂದ ನೃತ್ಯ ರೂಪುಗೊಂಡಿತೆಂದು ಹೇಳಿದೆ.  ದುರ್ದೈವದಿಂದ ಎಷ್ಟೋ ರಾಗಗಳು ಇಂದು ಹೆಸರಿಗೆ ಮಾತ್ರ ಉಳಿದಿವೆ. ಇಂದು ಹೆಚ್ಚೆಂದರೆ ಇಪ್ಪತ್ತು-ಇಪ್ಪತ್ತೈದು ರಾಗಗಳು ಮಾತ್ರ ಪ್ರಚಲಿತದಲ್ಲಿವೆ.

ಯಕ್ಷಗಾನ ಪ್ರಸಂಗಗಳು ಯಕ್ಷಗಾನ ಸಂಗೀತ ಪದ್ಧತಿಯ ರಾಗ, ತಾಳಗಳನ್ನು ಬಳಸಿ ಬರೆದ ಗೀತ ನಾಟಕಗಳು. ಬಹುಮಟ್ಟಿನ ಲೇಖಕರು ಕರ್ನಾಟಕದ ಮಲೆನಾಡು ಪ್ರದೇಶದವರು.  ಇಲ್ಲಿ ಪ್ರಸಂಗ ಅಂದರೆ ಘಟನೆ, ಸಂದರ್ಭ, ಅಥವಾ ಸನ್ನಿವೇಶ ಎಂದು ಅರ್ಥ. ಕಥೆಯ ವಸ್ತುಗಳು ಮುಖ್ಯವಾಗಿ ಸಂಸ್ಕೃತ ಮತ್ತು ಕನ್ನಡದಲ್ಲಿ ದೊರಕುವ ವಿವಿಧ ರಾಮಾಯಣ, ಮಹಾಭಾರತಗಳು, ಅಥವಾ ಲಕ್ಷ್ಮೀಶನ ಜೈಮಿನಿ ಭಾರತದಿಂದ ಆಯ್ದುಕೊಂಡ ಸನ್ನಿವೇಶಗಳು. ಪ್ರಧಾನ ಪುರಾಣಗಳಾದ  ಭಾಗವತ, ಪದ್ಮ, ಮತ್ತು ಸ್ಕಂದ ಪುರಾಣಗಳಿಂದ ಆಯ್ದ ಧಾರ್ಮಿಕ ಕಥೆಗಳನ್ನು ಆಧರಿಸಿ ಬರೆದ ಹಲವು ಪ್ರಸಂಗಗಳೂ ಇವೆ. ಅಪರೂಪವಾಗಿ ಕೆಲವೇ ಪ್ರಸಂಗಗಳ ವಸ್ತುಗಳನ್ನು ಬೃಹತ್ಕಥೆಯಂತಹ ಇತರ ಜನಪ್ರಿಯ ಕಥಾಸಂಗ್ರಹಗಳಿಂದ ಎತ್ತಿಕೊಂಡಿದ್ದನ್ನೂ ಕಾಣಬಹುದು..

ಪ್ರಸಂಗಗಳು ಕೇವಲ ರಾಗಗಳನ್ನು ಹಾಡಲು ಬರೆದ ಪದ್ಯಗಳಲ್ಲ.  ಇವು ಮೂಲತಃ ಯಕ್ಷಗಾನ ಶೈಲಿಯಲ್ಲಿ ಹಾಡಬಹುದಾದ ಹಾಗೂ ನೃತ್ಯ-ನಾಟಕ ರೂಪದಲ್ಲಿ ಪ್ರದರ್ಶಿಸಬಹುದಾದ ಉದ್ದೇಶಗಳನ್ನಿಟ್ಟು ಪದ್ಯರೂಪದಲ್ಲಿ ಬರೆದ ನಾಟಕಗಳೇ ಹೊರತು ಸಾಹಿತ್ಯದ ಪ್ರಯೋಗಕ್ಕಾಗಿ ಬರೆದವುಗಳಲ್ಲ. ಯಕ್ಷಗಾನ ಪದ್ಯಗಳೆಲ್ಲವನ್ನು ಹಳೆಗನ್ನಡದ ಛಂದಸ್ಸುಗಳನ್ನು ಉಪಯೋಗಿಸಿ ಹೆಣೆಯಲಾಗಿವೆ. ಇಡೀ ಪ್ರಸಂಗವೊಂದನ್ನು ಒಂದೇ ಛಂದಸ್ಸಿನಲ್ಲಿ ಬರೆದಿರಬೇಕೆಂದಿಲ್ಲ. ಮುನ್ನೂರು-ಮುನ್ನೂರೈವತ್ತು ಪದ್ಯಗಳ ಪ್ರಸಂಗವೊಂದರಲ್ಲಿ ದ್ವಿಪದಿ,

ಚೌಪದಿ, ಕಂದಗಳು, ಹಾಗೂ ಭಾಮಿನಿ ಮತ್ತು ವಾರ್ಧಿಕ್ಯ ಷಟ್ಪದಿಗಳು ಎಲ್ಲವನ್ನೂ ಕಾಣಬಹುದು. ಹಾಗಂತ ಪ್ರಸಂಗಗಳನ್ನು ಸಾಹಿತ್ಯವೇ ಅಲ್ಲ ಎಂದು ಪರಿಗಣಿಸುವಂತಿಲ್ಲ ಅನೇಕ ಸಮರ್ಥ ಪ್ರಸಂಗಕಾರರ ಭಾಷಾ ಪ್ರಭುತ್ವ ಮತ್ತು ಕಥಾ-ನಿರೂಪಣೆಯ ಕುಶಲತೆಯಿಂದ ಅವರ ಕೃತಿಗಳಲ್ಲಿ ಹಲವು ಸಾಹಿತ್ಯದ ಅಂಶಗಳನ್ನು ಸಹಜವಾಗಿ ಗುರುತಿಸಬಹುದು. ಆದ್ದರಿಂದಲೇ ಇತ್ತಿಚೆಗೆ ಯಕ್ಷಗಾನ ಪ್ರಸಂಗಗಳನ್ನು ಜಾನಪದ ಸಾಹಿತ್ಯದ ಜೊತೆಗೆ ಕನ್ನಡ ಸಾಹಿತ್ಯದ ಒಂದು ಅಂಗವಾಗಿ ಪರಿಗಣಿಸುವ ಪ್ರಯತ್ನಗಳು ನಡೆದಿವೆ.

ಸಮೃದ್ಧ ಜನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕ್ರಿಶ 2006 ರಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು, ಜಾನಪದ ವಿದ್ವಾಂಸರಾದ ಪ್ರೊ. ಶಿ. ಹಿ. ರಾಮಚಂದ್ರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಯೋಜನೆಯ ಅಡಿಯಲ್ಲಿ "ಅಶ್ವಮೇಧ ಪ್ರಸಂಗಗಳು" ಎಂಬ ಹೆಸರಿನ ಎಂಟು ಯಕ್ಷಗಾನ ಪ್ರಸಂಗಗಳ ಸಂಕಲನವೊಂದು "ಕಣಜ" ಅಂತರ್ಜಾಲದಲ್ಲಿ ಪ್ರಕಟಿತವಾಗಿದೆ. "ಕಣಜ" ವು ಕರ್ನಾಟಕ ಸರ್ಕಾರದ ಕರ್ನಾಟಕ ಜ್ಞಾನ ಆಯೋಗವು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಕಾರದೊಂದಿಗೆ ಸ್ಥಾಪಿಸಿದ ಅಂತರಜಾಲ ಕನ್ನಡ ಜ್ಞಾನಕೋಶ.

ಇಲ್ಲಿ ಇನ್ನೊಂದು ಮಾತನ್ನು ಹೇಳಬೇಕಾದದ್ದು ಅವಶ್ಯ. ಯಕ್ಷಗಾನ ಬಯಲಾಟ ಒಂದು ಆಶು-ನಾಟಕ. ಪ್ರಸಂಗದ ಪದ್ಯಗಳಲ್ಲಿ ಸಂಭಾಷಣೆಯ ವಿವರಗಳು ತುಂಬ ಕಡಿಮೆ. ಪಾತ್ರಧಾರಿಗಳು, ಪದ್ಯಗಳನ್ನು ಆಧರಿಸಿ, ಸಂಭಾಷಣೆಯನ್ನು, ಸಮಯ ಸ್ಫೂರ್ತಿಯಿಂದ ರಂಗದ ಮೇಲೆಯೇ ಬೆಳೆಸುತ್ತಾರ. ಅದೇ ಕಲಾವಿದ, ಒಂದೇ ಪದ್ಯಕ್ಕೆ ಬೇರೆ-ಬೇರೆ ಪ್ರದರ್ಶನಗಳಲ್ಲಿ ಬಿನ್ನವಾದ ಅರ್ಥವಿವರಣೆಯನ್ನು ನಿರೂಪಿಸುವದು ಸಾಮಾನ್ಯ. ಹಲವು ಪ್ರಸಿದ್ದ ಕಲಾವಿದರ ಸಮಯ ಸ್ಫೂರ್ತಿಯ ಸಂಭಾಷಣೆಗಳಲ್ಲಿ ಉಚ್ಚ ಮಟ್ಟದ ಸಾಹಿತ್ಯಕ ಝಳಕು ಮಿಂಚುವುದನ್ನು ಕಾಣಬಹುದು. ತಾಳಮದ್ದಲೆಗಳಲ್ಲಂತೂ ಕೆಲವು ಅರ್ಥಧಾರಿಗಳು ಸಂಭಾಷಣೆಯ ವೈಖರಿಗಾಗಿ ಬಹಳ ಪ್ರಸಿದ್ಧರಾಗಿದ್ದಾರೆ.

ಯಕ್ಷಗಾನ ಪ್ರಸಂಗಗಳ ಪ್ರಮುಖ ಲೇಖಕರು ಹಾಗೂ ಅವರ ಕೃತಿಗಳನ್ನು ಚರ್ಚಿಸುವ ಮೊದಲು ಕೆಲವು ಉದಾಹರಣೆಗಳನ್ನು ನೋಡೋಣ.

***ಭೀಷ್ಮ ಪ್ರತಿಜ್ಞೆ*** *ಪ್ರಸಂಗದಿಂದ, ದೇವವ್ರತ (ಭೀಷ್ಮನ ಮೊದಲ ಹೆಸರು), ತನ್ನ ತಂದೆ ಶಂತನು ಚಕ್ರವರ್ತಿಯ ಸಲುವಾಗಿ, ಸತ್ಯವತಿಯನ್ನು ಆಕೆಯ ತಂದೆ ದಾಸರಾಜನಿಂದ ಕೇಳಲು ಹೋದಾಗ ಅವರಿಬ್ಬರ ನಡುವಿನ ಸಂಭಾಷಣೆಯ ವೈಖರಿಯನ್ನು ನೋಡಿ:*

*ಸೃಷ್ಟಿಪಗೆ ಕೊಡಲೀಕೆಯುದರದಿ /*
*ಪುಟ್ಟಿದರ್ಭಕರಿಂಗೆ ಸುರನರ /*
*ದುಷ್ಟ ದಾನವರಿಂಗೆ ಬೆದರದ /*
*ದಿಟ್ಟ ನೀನರಿಯಾಗಿಹೆ / ಕೊಡೆನು ನಾನು //*

*ಚಿತ್ತವಿಸು ತವ ಸುತೆಯ ಕುವರರ /*
*ನರ್ತಿಯೊಳು ನಾ ಸಲಹಿಕೊಂಬೆನು /*
*ಮತ್ತೆ ಜನಕಗೆ ಹಿತವ ಬಯಸದ /*
*ಮೃತ್ಯು ಬಾಲಕನಲ್ಲವೈ / ತಿಳಿಯೊ ನೀನು //*

*ಸವತಿ ಮಕ್ಕಳ ಸ್ನೇಹವೆಂಬುದು /*
*ಭುವನದೊಳು ಪ್ರಖ್ಯಾತಿಯಿದೆ ಕೇಳ್ /*
*ಕುವರಿಯರ್ಭಕರಲ್ಲಿ ಪ್ರೀತಿಯು /*
*ತವಕದಿಂದಲಿ ನಶಿಪುದು / ಕಾಲಗತಿಗೆ //*

*ಎನ್ನ ವಂಶೋದ್ಭವನು ಪೂರುವು /*
*ತನ್ನ ಪಿತ ಯಯಾತಿ ನೃಪನಿಗೆ /*
*ಮುನ್ನ ಯೌವನವಿತ್ತು ಜರೆಯನು /*
*ಚೆನ್ನವಾಗನುಭವಿಸಿದಾ / ಪೇಳ್ವೆ ಕೇಳು //*

*ಬಲ್ಲೆ ನಾ ದುಷ್ಯಂತ ಭೂಪನು /*
*ವಲ್ಲಭೆಯ ಧಿಕ್ಕರಿಸಿ ಮರೆತಿಹು /*
*ದೆಲ್ಲವನು ಕೇಳಿರ್ಪೆ ಕ್ಷಾತ್ರಿಯ /*
*ಖುಲ್ಲರೆಸಗುವ ಚರಿತೆಯಾ / ಪೇಳಲೇಕೆ //*

*ಭರತಕುಲದರಸುಗಳು ಧರ್ಮವ /*
*ತೊರೆದು ಪೋಗುವರೆಲ್ಲವೆಂದಿಗು /*
*ಸುರರು ಮುನಿಗಳು ಸಿದ್ಧ ಸಾಧ್ಯರು ಕೇಳಲೀಕ್ಷಣದಿ //*
*ಒರೆವೆನೆನ್ನಯ ಶಪಥ ಲಾಲಿಸು /*
*ಪರಮ ಸಿಂಹಾಸನವನೇರುತ /*
*ಧರೆಯ ಪಾಲಿಪನಲ್ಲ ತಪ್ಪಲು ಶಂತ ಸುತನಲ್ಲ*

***ಕೃಷ್ಣ ಸಂದಾನ*** *ಪ್ರಸಂಗದಿಂದ, ಶ್ರೀ ಕೃಷ್ಣ, ಕೌರವ-ಪಾಂಡವರ ನಡುವೆ ಆಗಬಹುದಾದ ಯುದ್ದ ತಪ್ಪಿಸಲು, ಕೌರವನೊಡನೆ ಸಂಧಾನ ಮಾಡಬೇಕೆಂದು ಆತನ ಅಸ್ಥಾನಕ್ಕೆ ಹೋದಾಗ, ಕೌರವ ಗರ್ವದಿಂದ, ಕೃಷ್ಣನನ್ನು ಮಾತನಾಡಿಸದೆ ಸಿಂಹಾಸನದ ಮೇಲೆ ಕುಳಿತಿರುತ್ತಾನೆ. ದೇವಸ್ವರೂಪಿ ಕೃಷ್ಣ, ಆತನ ಗರ್ವ ಇಳಿಸುವ ಈ ನಾಟಕೀಯ ಪದ್ಯ ಮತ್ತು ಲಘು ಹಾಸ್ಯ ನೋಡಿ:*

*ಘನಮದೋನ್ಮತದಿಂದ ಕುಳಿತಿಹ*
*ಬಣಗರಾಯನ ಗರ್ವವಿಳಿಸುವೆ*
*ನೆನುತಲೊತ್ತಿದ ಸಿರಿಚರಣ ದುಂಗುಟದೊಳ ವನಿಯನು /*
*ಜನಪ ಕೇಳ್ ಇಳೆ ಮಗುಚಲ್ ಅಂಧಕ-*
*ನಣುಗ ಪೀಠಸಮೇತ ಹರಿಪದ*
*ವನಜದಲಿ ಕೆಡೆದಿರಲು ಕಂಡಿತೆಂದನಸುರಾರಿ //*

*ಏನಯ್ಯಾ ಇಂಥಾದೇನಯ್ಯ*
*ಏನಯ್ಯಾ ನಮ್ಮ ಬರವ ಕಂಡು ನಿನಗೆ*
*ಜ್ಞಾನ ತಪ್ಪಿತೇ ಬಹಳಾನಂದದೊಳಗೆ //*
*ಎನಲು ಕೋಪವ ತಾಳಿ*
*ಜನಪ ಘರ್ಜಿಸಿ ನುಡಿದ ಕೋಪದಿ*
*ಎನಗೆ ಮಾತುಗಳೇಕೆ ನೋಡಿದೆ ದಿನಗಳೆಲ್ಲ //*

***ಪಂಚವಟಿ*** *ಪ್ರಸಂಗದಿಂದ ರಾಮ-ಲಕ್ಷ್ಮ ಣ-ಸೀತೆಯರ ವನವಾಸದ ಕಾಲದಲ್ಲಿ ಪಂಚವಟಿಯಲ್ಲಿದ್ದಾಗ ಒಮ್ಮೆ, ಶೂರ್ಪಣಖಿ ನರ-ವಾಸನೆಯ ಗುರುತು ಹಿಡಿದುಅವರನ್ನು ತಿನ್ನುವ ಆಶೆಯಿಂದ ದೂರದಿಂದ ನೋಡುತ್ತಾಳೆ. ಆದರೆ ಶ್ರೀ ರಾಮನ ಸೌಂದರ್ಯಕ್ಕೆ ಒಮ್ಮೆ ಲೆ ಮರುಳಾಗಿ,ಈತನನ್ನು ನಾಮೋಹಿಸಿ ಮದುವೆಯಾಗುತ್ತೇನೆಂದುಕೊಂಡು, ಮಾಯದಿಂದ ಸುಂದರ ಮಹಿಳೆಯ ರೂಪದಲ್ಲಿ ಬಂದು ರಾಮನನ್ನು ಮೋಹಿಸುವ ಅವಳ ಪ್ರಯತ್ನದ ಪರಿಯನ್ನು ಕೇಳಿ:*

*ರಾಘವ ನರಪತೆ ಶೃಣು ಮಮ ವಚನಂ*
*ನೀ ಗುಣನಿಧಿಯೆಂದು ನಿನ್ನ ಸೇರಿದೆ ಬಂದು //*
*ಅತಿ ಕುಲವತಿ ನಾನು ಪೃಥವಿ ಪಾಲಕ ನೀನು*
*ರತಿದೇವಿಗೆಣೆ ನಾನು ಮನ್ಮ ಥ ನೀನು //*

*ಸರಸಿಜಾಂಬಕಿ ನಾನು ತರಣಿ ಪ್ರಕಾಶ ನೀನು*
*ವರಬಿಂಬ ಧರೆ ನಾನು ಅರಗಿಣಿ ನೀನು //*
*ಕವಲು ಮನವ ಬಿಟ್ಟು ತವಕದಿ ದಯವಿಟ್ಟು*
*ಸವಿ ತಾಂಬೂಲವ ನೀಡು ಸರಸ ಮಾತಾಡು //*

ಯಕ್ಷಗಾನ ಪ್ರಸಂಗಗಳ ಸಾಹಿತ್ಯ ಎಷ್ಟು ದೊಡ್ಡದು? ಎಂದು ಪ್ರಾರಂಭವಾಯಿತು? ಮುಖ್ಯ ಪ್ರಸಂಗಕಾರರು ಯಾರು? ಶಿವರಾಮ ಕಾರಂತರು ತಮ್ಮ "ಯಕ್ಷಗಾನ" ಸಂಶೋಧನ ಗ್ರಂಥದ "ಪ್ರಸಂಗಕರ್ತರು ಮತ್ತು ಪ್ರಸಂಗಗಳು" (Playwrights and Plays) ಎಂಬ ಪ್ರಕರಣದಲ್ಲಿ ಹದಿನಾರನೆಯ ಶತಮಾನದಿಂದ ಇಪ್ಪತ್ತನೇ ಶತಮಾನದವರೆಗಿನ ಮುಖ್ಯ ಪ್ರಸಂಗಕರ್ತರು ಹಾಗೂ ಅವರ ಕೃತಿಗಳನ್ನು ಕೂಲಂಕಶವಾಗಿ ಚರ್ಚಿಸಿದ್ದಾರೆ. ಸುಮಾರು ಮೂವತ್ತು ಲೇಖಕರ 150 ಕ್ಕೂ ಹೆಚ್ಚು ಕೃತಿಗಳನ್ನು ಉಲ್ಲೇಖಿಸಿದ್ದಾರೆ. ಮೊದಲೇ ಹೇಳಿದಂತೆ, ಇಲ್ಲಿಯ ತನಕ ಸುಮಾರು ಮುನ್ನೂರಾ ಐವತ್ತಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳು ಪ್ರಕಟಿತ ರೂಪದಲ್ಲಿ ದೊರಕಿವೆ. ಹಲವು ಪ್ರಸಂಗಗಳ ಲೇಖಕರು ಯಾರೆಂಬುದು ನಿಖರವಾಗಿ ಗೊತ್ತಿಲ್ಲ. ರಂಗಭೂಮಿಯ ಪ್ರದರ್ಶನದ ದೃಷ್ಟಿಯಿಂದ ಕೆಲವೇ ಪ್ರಸಂಗಗಳು ಇನ್ನೂ ಜನಪ್ರಿಯವಾಗಿ ಉಳಿದಿವೆ. ಉಳಿದ ಕೆಲವು ಪ್ರಸಂಗಗಳು ತಾಳಮದ್ದಲೆಗಳಲ್ಲಿ ಮಾತ್ರ ಯಶಸ್ಸನ್ನು ಕಂಡಿವೆ. ಇಲ್ಲಿ ನಾನು ಕೆಲವೇ ಜನಪ್ರಿಯ ಪ್ರಸಂಗಗಳನ್ನು ಮಾತ್ರ ಹೆಸರಿಸುತ್ತೇನೆ.

ಕಾರಂತರ ಸಂಶೋಧನೆಯ ಪ್ರಕಾರ ಕ್ರಿಶ. 1564 ನೇ ಇಸ್ವಿಯಲ್ಲಿ ಬರೆದ ವಿಷ್ಣು ವಾರಂಬಳ್ಳಿ ಎಂಬವನ "ವಿರಾಟ ಪರ್ವ" ಇಲ್ಲಿಯವರೆಗೆ ದೊರೆತ ಮೊಟ್ಟಮೊದಲನೆಯ ಯಕ್ಷಗಾನ ಪ್ರಸಂಗ. "ಬಾಣಾಸುರ ಕಾಳಗ" ಮತ್ತು "ಇಂದ್ರ ಕೀಲಕ" ಎಂಬ ಇನ್ನೂ ಎರಡು ಕೃತಿಗಳನ್ನೂ ಈತ ರಚಿಸಿದ್ದಾನೆ. ಇತ್ತೀಚೆಗೆ ಕೆಲವರು "ವಿರಾಟ ಪರ್ವ" ಕ್ಕಿಂತ ಮೊದಲೇ ಬರೆದ ಪ್ರಸಂಗಳಿದ್ದವೆನ್ನುವದಕ್ಕೆ ಪುರಾವೆಗಳಿವೆ ಎಂದಿದ್ದಾರೆ. ಸಮಗ್ರ ರಾಮಾಯಣದ ಕಥೆಯನ್ನು ನಿರೂಪಿಸುವ ಹದಿನಾರನೆ ಶತಮಾನದಲ್ಲಿ ಬರೆದವುಗಳೆಂದು ಅಂದಾಜಿಸಿದ ಎಂಟು ಪ್ರಸಂಗಗಳು ದೊರಕಿವೆ. ಈ ಪ್ರಸಂಗಗಳ ಲೇಖಕ ಯಾರು ಎಂಬುದು ಖಾತ್ರಿಯಾಗಿ ಗೊತ್ತಿಲ್ಲ. ಹಲವು ಸಂಶೋಧಕರು ಇವುಗಳ ಲೇಖಕ ಪಾರ್ತಿ ಸುಬ್ಬ ಎಂಬ ಪ್ರಸಂಗಕಾರ ಎಂದಿದ್ದಾರೆ. ಅಷ್ಟೇ ಅಲ್ಲ ಅವರು ಪಾರ್ತಿ ಸುಬ್ಬನನ್ನು ಯಕ್ಷಗಾನದ ಪಿತಾಮಹ ಎಂದು ಗಣಿಸುತ್ತಾರೆ. ಪಂಚವಟಿ, ಶ್ರೀರಾಮ ಪಟ್ಟಾಭಿಷೇಕ, ಅಂಗದ ಸಂಧಾನ ಮುಂತಾದ ಈ ರಾಮಾಯಣ ಮಾಲೆಯ ಪ್ರಸಂಗಗಳು ತುಂಬ ಜನಪ್ರಿಯವಾಗಿವೆ.

ಹದಿನೇಳನೇ ಶತಮಾನದ ದೇವಿದಾಸ ಅನೇಕ ಮುಖ್ಯ ಕೃತಿಗಳನ್ನು ರಚಿಸಿದ್ದಾನೆ. ಈತನು ಬರೆದ ಹಲವು ಪ್ರಸಂಗಗಳು ಇಂದಿಗೂ ರಂಗಭೂಮಿಯ ಮೇಲೆ ಯಶಸ್ವಿಯಾಗಿ ಪ್ರದರ್ಶನವಾಗುತ್ತಿವೆ. 'ಚಿತ್ರಸೇನ", "ಅಭಿಮನ್ಯು ಕಾಳಗ", "ಕೃಷ್ಣ ಸಂಧಾನ", "ಭೀಷ್ಮ ಪರ್ವ" ಮತ್ತು "ಬಭ್ರುವಾಹನ ಕಾಳಗ" ದೇವಿದಾಸನ ಪ್ರಮುಖ ಪ್ರಸಂಗಗಳು. "ಬಭ್ರುವಾಹನ ಕಾಳಗ" ಅತ್ಯಂತ ಜನಪ್ರಿಯ ಪ್ರಸಂಗ. ಕಥಾವಸ್ತು ಲಕ್ಷ್ಮೀಶನ ಜೈಮಿನಿ ಭಾರತದಿಂದ ಆಯ್ದುಕೊಂಡಿದ್ದು. "ಬಭ್ರುವಾಹನ ಕಾಳಗ" ದ ಒಂದು ಪದ್ಯ ಕೇಳಿ:

***<u>ಬಭ್ರುವಹನ ಕಾಳಗ</u>*** *ಪ್ರಸಂಗದಿಂದ: ಮಹಾಭಾರತ ಯುದ್ದದ ನಂತರ ಪಾಂಡವರು ಅಶ್ವಮೇಧ ಯಾಗ ಕೈಕೊಳ್ಳುತ್ತಾರೆ. ಯಜ್ಞದ ಕುದುರೆಯ ಜೊತೆ ಅರ್ಜುನ ದಿಗ್ವಿಜಯಕ್ಕೆ ಹೊರಟು, ಹಲವು ರಾಜರನ್ನು ಗೆದ್ದು, ಮಣಿಪುರಿಗೆ ಬರುತ್ತಾನೆ. ಮಣಿಪುರದ ಅರಸ ಬಭ್ರುವಾಹನ ಕುದುರೆಯನ್ನು ಕಟ್ಟಿ ಅರ್ಜುನ ಸೇನೆಯೊಡನೆ ಯುದ್ದಕ್ಕೆ ಅಣಿಯಾಗುತ್ತಾನೆ. ಆದರೆ ಬಂದವನು ಅರ್ಜುನನೆಂದು ಅರಿತು, ಬಭ್ರುವಾಹನನ ತಾಯಿ ಚಿತ್ರಾಂಗದೆ, ಮಗನನ್ನು ಕರೆದು, ಅರ್ಜುನ ನಿನ್ನ ತಂದೆ, ಆತನೊಡನೆ ಯುದ್ದ ತರವಲ್ಲ. ಕಪ್ಪ ಕಾಣಿಕೆಯೊಂದಿಗೆ ಹೋಗಿ ನಮಸ್ಕರಿಸಿ, ತಾನು ನಿನ್ನ ಮಗನೆಂದು ಹೇಳಿ ಕ್ಷಮೆ ಬೇಡಿಕೋ ಎನ್ನುತ್ತಾಳೆ. ಅದರಂತೆ ಬಭ್ರುವಾಹನ ಹೋಗಿ ಕ್ಷಮೆ ಬೇಡಿದಾಗ, ನೀನು ನನ್ನ ಮಗನಾಗಲು ಸಾಧ್ಯವೇ ಇಲ್ಲ ಎಂದು ಹೀಯಾಳಿಸುತ್ತಾನೆ. ಅದರಿಂದ ವೀರ ಬಭ್ರುವಾಹನ ಕೋಪಗೊಂಡು ಯುದ್ದದಲ್ಲಿ ನಿನ್ನನ್ನು ಸೋಲಿಸದಿದ್ದರೆ ತಾನು ಚಿತ್ರಾಂಗದೆಯ ಮಗನಲ್ಲ ಎಂದು ಘರ್ಜಿಸುತ್ತಾನೆ. ವೀರ ರಸದ ಈ ಸಂಭಾಷಣೆಯನ್ನು ಕೇಳಿ:*

*ಚಿತ್ರಾಂಗದೆಯು ತನ್ನ ಮಿತ್ರರೊಡನೆ ಕೂಡಿ ವಿ /*
*ಚಿತ್ರ ಗರ್ಭವ ತಾಳಿ ಪಡೆದೀತನ //*
*ಕ್ಷತ್ರಿಕುಲದವರು ಶರಣುಬರುವುದುಂಟೆ /*
*ಪುತ್ರ ಗಂಧರ್ವರ ಕುಲಕೆ ಪುಟ್ಟಿದನೀತ //*

*ಕಂದರೆನಗೆ ಇಲ್ಲ ಕಾಂತೆ ಸುಭದ್ರೆಯೊಳು /*
*ನಂದನನಭಿಮನ್ಯುವೊರ್ವ ತಾ ಪುಟ್ಟಿ //*
*ಮುಂದುವರಿದು ರಣದಿ ಮುರಿದುರಾಯರನೆಲ್ಲ /*
*ಸಂದನು ಸುರಪುರಕೆ ಇಂದುಕುಲಾಧಿಪನು //*

*ಫಲುಗುಣನು ನುಡಿಯಲ್ಕೆ ಮೀಸೆಯ /*
*ನಲುಗಿ ತಿರುಹುತ ಬಭ್ರುವಾಹನ /*
*ನನಲನಂತಕ್ಷಿಗಳು ಕೆಂಪಡರಿದುವು ನಿಮಿಷದಲಿ //*
*ಎಲವೊ ಎನ್ನಯ ಜನನಿಯಿಕ್ಕಿದ /*
*ಬಲೆಗೆ ಸೈರಿಸಿದೊಮ್ಮೆ ನಿನ್ನಯ /*
*ತಲೆಯಕೊಂಬೆನು ತೃಣಕೆ ಬಲಸಹಿತೆಂದು ಗರ್ಜಿಸಿದ //*

*ತಾತ ಫಲುಗುಣ / ಕೇಳು ನಿನ್ನಯ /*
*ಜಾತನೆನಿಸುವೆ / ಜನರ ಮಧ್ಯದಿ //*

*ಚಿತ್ರಾಂಗದೆಯರ / ಬೈದು ಭಂಗಿಸಿ /*
*ಪುತ್ರನಲ್ಲೆಂದು / ಜರೆದೆಯೆನ್ನನು //*

*ಎನ್ನ ಉದ್ಭವ / ವೈಶ್ಯನೆಂದೆಲಾ /*
*ಮುನ್ನವಾಡಿದ / ಗುರುತ ಕಟ್ಟಿಕೊ //*

*ನಿನ್ನ ರಣದಲಿ / ಕೆಡಹದಿರ್ದರೆ /*
*ಪನ್ನಗೇಂದ್ರನ / ಮೊಮ್ಮ ನೇಯಲ್ಲ //*

ಜೈಮಿನಿ ಭಾರತದಲ್ಲಿಯ ಸನ್ನಿವೇಶವೊಂದರ ಆಧಾರಿತ ಇನ್ನೊಂದು ಜನಪ್ರಿಯ ಪ್ರಸಂಗ "ತಾಮ್ರಧ್ವಜ ಕಾಳಗ". ಇದರ ಲೇಖಕ ಚಂದ್ರಮೌಳಿಯ ಮಗ ರಾಮ ಎಂಬವನು. ಈ ಶತಮಾನದ ಇನ್ನೊಬ್ಬ ಪ್ರಸಿದ್ಧ ಪ್ರಸಂಗಕಾರ ಹಟ್ಟಿಯಂಗಡಿ ರಾಮ ಭಟ್ಟ. ಈತ "ಲವ-ಕುಶ", "ದ್ರೌಪತಿ ಸ್ವಯಂವರ", "ಅತಿಕಾಯ ಕಾಳಗ", "ಸುಭದ್ರಾ ಪರಿಣಯ" ಮುಂತಾದ ಹಲವು ಕೃತಿಗಳನ್ನು ರಚಿಸಿದ್ದಾನೆ.

ಹದಿನೆಂಟನೇ ಶತಮಾನದ ಪ್ರಸಂಗಕಾರರಲ್ಲಿ ವಾಸುದೇವ ಪ್ರಭು ಎಂಬವನ "ಸಮುದ್ರ ಮಥನ", "ಚಂದ್ರಹಾಸ ಚರಿತ್ರೆ", ಮತ್ತು "ಕಂಸ ವಧೆ" ಇತ್ತಿಚಿನ ತನಕವೂ ರಂಗಸ್ಥಳದ ಮೇಲೆ ಮೆಚ್ಚಿಗೆ ಪಡೆದ ಪ್ರಸಂಗಗಳು.

ಹತ್ತೊಂಭತ್ತನೇ ಶತಮಾನದ ಪ್ರಸಂಗಕಾರ ಗೇರಸೊಪ್ಪೆಯ ಶಾಂತಪ್ಪಯ್ಯ "ಪುತ್ರಕಾಮೇಷ್ಟಿ" ಮತ್ತು "ಕರ್ಣಾರ್ಜುನರ ಕಾಳಗ" ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ಎರಡೂ ಪ್ರಸಂಗಗಳು, ಅದರಲ್ಲಿಯೂ "ಕರ್ಣಾರ್ಜುನರ ಕಾಳಗ" ರಂಗಭೂಮಿಯ ಮೇಲೆ ತುಂಬ ಯಶಸ್ವಿಯಾಗಿವೆ.

ಕನ್ನಡ ಸಾಹಿತ್ಯಭಿಮಾನಿಗಳಿಗೆ ಚಿರಪರಿಚಿತನಾದ, ಮಹಾಕವಿ ಎನಿಸಿಕೊಂಡ ಮುದ್ದಣ, ಯಕ್ಷಗಾನ ಪ್ರಿಯನೂ ಅಗಿದ್ದ. ಆತನು ರಚಿಸಿದ "ರತ್ನಾವತಿ ಕಲ್ಯಾಣ" ಹಲವು ಪ್ರೇಕ್ಷಣೀಯ ಸನ್ನಿವೇಷಗಳನ್ನೊಳಗೊಂಡ ಅತ್ಯಂತ ಜನಪ್ರಿಯವಾದ ಪ್ರಸಂಗ. "ಕುಮಾರ ವಿಜಯ" ಎಂಬುದು ಮುದ್ದಣನ ಇನ್ನೊಂದು ಪ್ರಸಂಗ. ರಂಗ ಪ್ರದರ್ಶನದ ದೃಷ್ಟಿಯಿಂದ ಕುಮಾರ ವಿಜಯ ಅಷ್ಟೇನೂ ಯಶಸ್ವಿಯಾಗಲಿಲ್ಲ.

ಇಪ್ಪತ್ತನೇ ಶತಮಾನದ ಪ್ರಸಂಗಗಳಲ್ಲಿ ಹೆಚ್ಚಾಗಿ ಕೇಳಿ ಬರುವ ಹೆಸರುಗಳೆಂದರೆ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಯವರ 'ವಿದ್ಯುನ್ಮತಿ ಕಲ್ಯಾಣ" ಮತ್ತು "ಭೀಷ್ಮ ವಿಜಯ", ಬಲಿಪ ನಾರಾಯಣ ಭಾಗವತರ "ಗದಾಪರ್ವ", ಮತ್ತು "ರಕ್ತರಾತ್ರಿ", ಹೊಸ್ತೋಟದ ಮಂಜುನಾಥ ಭಾಗವತರ "ರಾಮ ನಿರ್ಯಾಣ" ಹಾಗೂ "ವೈಜಯಂತಿ ಪರಿಣಯ" ಮುಂತಾದವುಗಳು.

ಒಂದೇ ಕಥೆಯನ್ನು ಎರಡು-ಮೂರು ಪ್ರಸಂಗಕಾರರು ತಮ್ಮದೇ ಆದ ಶೈಲಿಯಲ್ಲಿ ಬರೆದ ಸಾಕಷ್ಟು ಉದಾಹರಣೆಗಳೂ ಇವೆ.

ಎಲ್ಲ ಕಲೆಗಳಂತೆ ಯಕ್ಷಗಾನವೂ ಸಾಕಷ್ಟು ಏರಿಳಿತಗಳನ್ನು ಕಂಡಿದೆ. ಯಕ್ಷಗಾನ ಜನಪ್ರಿಯವಾಗುತ್ತಿರುವ ಇಂದಿನ ಅಂತರ್ಜಾಲ ಯುಗದಲ್ಲಿ, ನೂರೆಂಟು ಅಂತರ್ಜಾಲದ ತಾಣಗಳಲ್ಲಿ ಯಕ್ಷಗಾನವನ್ನು ಕುರಿತು ಚಿಕ್ಕ-ಪುಟ್ಟ ಲೇಖನಗಳನ್ನು ನೋಡಬಹುದು. ವಿಶಾದದ ಸಂಗತಿಯೆಂದರೆ, ಹಲವು ಲೇಖನಗಳಲ್ಲಿ ಬಹಳಷ್ಟು ವಿಷಯಗಳ ಪನರಾವರ್ತನೆ, ಒಂದಕ್ಕೊಂದು ವಿರೋಧಾತ್ಮಕ ಮಾಹಿತಿಗಳು, ಹಾಗೂ ಗೊಂದಲಮಯ ವಿಚಾರಗಳು ನುಸುಳಿಕೊಂಡಿವೆ.

ಕೊನೆಯದಾಗಿ ಭಕ್ತಿರಸಪೂರ್ಣವಾದ ಎರಡು ಪದ್ಯಗಳನ್ನು ಓದಲಿಚ್ಛಿಸುತ್ತೇನೆ:

***ಕೃಷ್ಣ ಸಂಧಾನ*** *ಪ್ರಸಂಗದಿಂದ: ಕೃಷ್ಣ, ಸಂಧಾನಕ್ಕೆಂದು ಹಸ್ತಿನಾಪುರಕ್ಕೆ ಬಂದವನು ಕೌರವನ ಅರಮನೆಗೆ ಹೋಗದೆ, ನೇರವಾಗಿ ಭಕ್ತ ವಿದುರನ ಮನೆಗೆ ಹೋಗುತ್ತಾನೆ. ಅನಿರೀಕ್ಷಿತವಾಗಿ ಮನೆಗೆ ಬಂದ ತನ್ನ ದೇವನನ್ನು ಕಂಡು ವಿದುರನು ಭಾವಪರವಶನಾಗಿ ಶ್ರೀ ಕೃಷ್ಣನನ್ನು ಕೊಂಡಾಡುವ ಈ ಪದ್ಯ. ಕೇಳಿ:*

*ನೋಡಿದಂ ಕಣ್ಮಣಿಯ ಚಿನ್ಮಯನ ಮೂರ್ತಿಯಂ*
*ಮಾಡಿದಂ ನಿಯತ ಸಂಸ್ತುತಿಗಳಂ ಪಿರಿದು ಕೊಂಡ್-*
*ಆಡಿದಂ ತನಗೆ ಲಕ್ಷ್ಮೀರಮಣ ದಯವಾದನೆನುತ್ತಲಾ ವಿದುರನಂದು ॥*
*ಪಾಡಿದಂ ಗುಣಗಣವ ಬೇಕಾದ ವರಗಳಂ*
*ಬೇಡಿದಂ ಮನದೊಳಾನಂದ ಸಾಗರದೊಳೋ-*
*ಲಾಡಿದಂ ಕೈಮುಗಿದು ನಿಂದಿರಲ್ಕವನ ತಕ್ಕೈಸಿ ಮುರಹರನೆಂದನೂ*

***ಭೀಷ್ಮ ಪರ್ವ*** *ಪ್ರಸಂಗದಿಂದ: ಮಹಾಭಾರತ ಯುದ್ಧದಲ್ಲಿ, ಬೀಷ್ಮನ ಬಾಣವೊಂದು ಕೃಷ್ಣನ ಹಣೆಗೆ ತಾಗಿದಾಗ ಕೃಷ್ಣ, ಯುದ್ಧದಲ್ಲಿ ಚಕ್ರವನ್ನೆತ್ತುವದಿಲ್ಲವೆಂದು ಪಣ ತೊಟ್ಟಿದ್ದರೂ ಕೂಡ, ಸಿಟ್ಟಿನಿಂದೆಂಬಂತೆ ಚಕ್ರ ಮೇಲೆತ್ತುತ್ತಾನೆ. ಭೀಷ್ಮ ಕೂಡ, ಹಿಂದೆ ಕರ್ಣ ಭೀಷ್ಮನನ್ನು, ನೀನು ಮುದುಕ, ನಿನಗೇಕೆ ಸೇನಪತಿ ಪಟ್ಟ ಎಂದು ಹೀಯಾಲಳಿಸಿದಾಗ ಯುದ್ಧದಲ್ಲಿ ನಾನು ಶ್ರೀ ಕೃಷ್ಣ ಚಕ್ರವನ್ನು ಕೈಗೆತ್ತುವಂತೆ ಮಾಡುತ್ತೆನೆ ಎಂದು ಪಣ ತೊಟ್ಟಿರುತ್ತಾನೆ. ಇದು ಕೃಷ್ಣನಿಗೂ ಗೊತ್ತು. ಭೀಷ್ಮ ಕೃಷ್ಣ ಭಕ್ತ. ಆ ಸಂದರ್ಭದಲ್ಲಿ, ಬೀಷ್ಮನು ಕೃಷ್ಣನಿಗೆ ಹೇಳುವ ಮಾತುಗಳು.*

*ಶ್ರೀ ಮನೋಹರ ಸ್ವಾಮಿ ಪರಾಕು*
*ಪ್ರೇಮದೊಳೆನ್ನಯ ಮಾತ ಲಾಲಿಸಬೇಕು ॥*

*ಎನ್ನಯ ಕಂಠವ ಹಿರಿಯಲು ಚಕ್ರವ*
*ಚಿನ್ಮಯ ನೀನಿಂದು ಪಿಡಿದಿಹೆಯಾ /*
*ಚೆನ್ನಾಯ್ತು ಸೇವಕ ಜಯವ ಪಾಲಿಸಿ ಲೋಕ-*
*ವನ್ನು ಪೊರೆವ ದೇವ-ನಹುದೋ ಮಹಾನುಭಾವ ॥ ಶ್ರೀ॥*

*ಇಂದಿರೇಶನೆ ನಾನು ಇವರ ಜಗಳವನ್ನು*
*ನಿಂದು ಈಕ್ಷಿಸಲಾರೆ ನೋಡಿ ಕಣ್ಣಾರೆ /*
*ಎಂದಾದರೀ ಕಾಯ ಎರವಿನೊಡವೆ ಜೀಯ*
*ಇಂದೇ ಪೋಗಲಿತೀರ್ಚ ಚಕ್ರವನೆಚ್ಚು ॥ ಶ್ರೀ॥*

*ಎನಗೆ ನಗೆಯು ಬಂತು ನಿನ್ನ ಕಂಡಿಂತು*
*ತೃಣವ ಮುರಿವಿದಕೆ ಕೊಡಲಿಯು ಬೇಕೆ /*
*ಘನವಾಯ್ತು ಚಕ್ರವ ಕಳುಹಿಸೆನ್ನಯ ರೋಮ-*
*ವನ್ನು ಕಡಿದರೆ ನೀನು ಶರಣನೆ ನಿನಗೆ ॥ ಶ್ರೀ॥*

ಈ ನನ್ನ ಲೇಖನಕ್ಕೆ ಬೇಕಾದ ಕೆಲವು ಮಾಹಿತಿಗಳನ್ನು ಒದಗಿಸಿ ಸಹಾಯ ಮಾಡಿದ ಟೊರೊಂಟೊದ "ಯಕ್ಷಮಿತ್ರ" ಮಂಡಳಿಯ ವಿನಾಯಕ ಹೆಗಡೆ, ರಾಗು ಕಟ್ಟಿನಕೆರೆ, ಹಾಗೂ ನವೀನ ಹೆಗಡೆ ಅವರನ್ನು ನಾನಿಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.